ಮಂತ್ರಿಗಳಾಗಿದ್ದಾಗ, ಅರ್ಧ ಹಣವನ್ನು ಆದಕ್ಕೆ ವಿನಿಯೋಗಿಸುತ್ತೇನೆಂದು ಹೇಳಿದ್ದರು. ನಿನ್ನೆ ತಾನೇ ನಾನು ತಾವು ಬರೆದಿರುವ ಪತ್ರ ನೋಡಿದ್ದೇನೆ. ತಾವು ಹೊಸ ಜಾಗವನ್ನು ಗುರುತಿಸಿ ಇದೇ ತಿಂಗಳ ಎರಡನೇ ತಾರೀಖು ಪತ್ರ ಬರೆದಿದ್ದೀರಿ. ನಾನು ತಕ್ಷಣ ಅಲ್ಲಿಗೆ ಅಧಿಕಾರಿಗಳನ್ನು ಕಳುಹಿಸಿ, ಆ ಜಾಗವನ್ನು ವೀಕ್ಷಿಸಿ, ಕಾರ್ಯಾರಂಭ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ತಾವು ಈ ವರ್ಷವೇ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಆಗಬಹುದು.

ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ : ಸರ್ಕಾರ ಕೆ.ಎಸ್.ಆರ್.ಟಿ.ಸಿ ಎಂಬ ಒಂದು ಸಂಸ್ಥೆಯನ್ನು ಮಾಡಿದೆ ಎಂಬುದೇ ನಮಗೆ ಗೊತ್ತಾಗದಂತಾಗಿದೆ. ನಾನು ಬಹಳ ದಿವಸಗಳಿಂದ ಕೇಳುತ್ತಿದ್ದು, ಈ ವರ್ಷ ಸುಮಾರು 10 ಸಾರಿ ತಮ್ಮನ್ನು ಕಂಡು ಕೇಳಿದರೂ, ತಾವು ಬಸ್ಸಿನ ಸೌಕರ್ಯ ಮಾಡಿಕೊಟ್ಟಿಲ್ಲ. ಚಿತ್ರದುರ್ಗದವರೆಗೂ ಬಹಳಷ್ಟು ಬಸ್ಸುಗಳು ಓಡಾಡುತ್ತಿದ್ದು, ಹೊಳಲ್ಕೆರೆಯಿಂದ ಚಿತ್ರದುರ್ಗ ಮಾರ್ಗವಾಗಿಯಾದರೂ ಬಸ್ಸಿನ ವ್ಯವಸ್ಥೆ ಕಲ್ಪಿಸಿಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಿಮ್ಮ ಸಮಸ್ಯೆ ಏನಿದೆ ಎಂಬುದನ್ನು ಅಲ್ಲಿಗೆ ಬಂದು ತಿಳಿದು, ಬಸ್ಸಿನ ಸೌಕರ್ಯ ಒದಗಿಸಿಕೊಡುತ್ತೇನೆ.

ಶ್ರೀಮತಿ ಅನುಸೂಯಮ್ಮ ನಟರಾಜನ್ : ನಾನು ಚುಕ್ಕೆ ಗುರ್ತಿನ ಪ್ರಶ್ನೆ ಕೇಳಿದ್ದು, ಆದರೆ, ನನಗೆ ಲಿಖಿತ ಮೂಲಕವಾಗಿ ಉತ್ತರ ನೀಡಿದ್ದಾರೆ. ನಾನು ಸುಮಾರು ಕಳೆದ ಮೂರು ತಿಂಗಳಿನಿಂದ ಕೇಳುತ್ತಿದ್ದು, ಚಿಕ್ಕಬಳ್ಳಾಪುರದ ಸುತ್ತಮುತ್ತ ಒಳ್ಳೆಯ ಬಸ್ಸು ನಿಲ್ದಾಣಗಳಾಗಿದ್ದು, ಉಪ ವಿಭಾಗದ ನಮ್ಮ ಚಿಕ್ಕಬಳ್ಳಾಪುರದಲ್ಲಿ ಇದುವರೆಗೆ ಒಂದು ಒಳ್ಳೆಯ ಬಸ್ಸು ನಿಲ್ದಾಣವಾಗಿಲ್ಲ. ಮಳೆಗಾಲದಲ್ಲಿ ನೋಡಿದರೆ ದ್ವೀಪವಿದ್ದಹಾಗೆ ಇರುತ್ತದೆ. ಕೇವಲ ಒಂದು ಷೆಡ್ ಮಾತ್ರ ಕಟ್ಟಿದ್ದು, ಅಲ್ಲಿ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಒಂದೂವರೆ ಲಕ್ಷ ಜನಸಂಖ್ಯೆ ಇರುತ್ತಾರೆ. ವಿಶ್ವೇಶ್ವರಯ್ಯನವರು ಜನಿಸಿದ ಸ್ಥಳವಿದು. ಆದರೂ, ಇದುವರೆಗೂ ಅಲ್ಲಿ ಬಸ್ಸು ನಿಲ್ದಾಣವಾಗಿಲ್ಲ. ದಯಮಾಡಿ ಅಲ್ಲಿ ಒಂದು ಬಸ್ಸು ನಿಲ್ದಾಣ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅವರ ಬೇಡಿಕೆ ಪರಿಶೀಲನೆಯಲ್ಲಿದ್ದು ಪರಿಶೀಲಿಸಿದ ನಂತರ, ತೀರ್ಮಾನ ತೆಗೆದುಕೊಳ್ಳುತ್ತೇನೆ.

ಹಾಸನ ಜಿಲ್ಲಾ ಪೋಲೀಸ್ ವಸತಿ ಸಹಕಾರ ಸಂಘ

567 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲಾ ಪೋಲೀಸ್ ಗೃಹ ನಿರ್ಮಾಣ ಸಹಕಾರ ಸಂಘವು ಯಾವ ದಿನಾಂಕದಿಂದ ಅಸ್ತಿತ್ವದಲ್ಲಿದೆ?*

ಆ) *ಕಳೆದ 3 ವರ್ಷಗಳಿಂದ ಪ್ರತಿ ವರ್ಷ ಎಷ್ಟು ಕಾರ್ಯಕಾರಿ ಸಮಿತಿ ಸಭೆಗಳು ನಡೆದಿದೆ? (ವಿವರ ನೀಡುವುದು)*

ಇ) *ಈ ಕಾರ್ಯಕಾರಿ ಸಮಿತಿ ಸದಸ್ಯರುಗಳ ಹೆಸರು ಮತ್ತು ವಿಳಾಸಗಳೇನು?*

ಈ) *ಈ ಸಹಕಾರ ಸಂಘದ ವಶದಲ್ಲಿರುವ ವಸತಿ ಯೋಜನೆಗೆ ಸೇರಿದ ಜಮೀನಿನಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಬಿಟ್ಟಿರುವ ಎಷ್ಟು ಸೈಟುಗಳನ್ನು ಪರಭಾರೆ ಮಾಡಲಾಗಿದೆ? (ವಿವರ ನೀಡುವುದು)*

ಉ) *ಈ ರೀತಿ ನಾಗರೀಕ ಸೌಲಭ್ಯಕ್ಕಾಗಿ ಬಿಟ್ಟಿರುವ ಸೈಟುಗಳನ್ನು ಪರಭಾರೆ ಮಾಡಲು ಯಾರ ಅನುಮತಿ ಪಡೆಯಲಾಗಿದೆ? (ವಿವರ ನೀಡುವುದು)*

ಊ) *ಈ ಸಹಕಾರ ಸಂಘದ ಆಡಿಟ್ ಆಗಿದೆಯೇ? (ವಿವರ ನೀಡುವುದು)*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಹಾಸನ ಜಲ್ಲಾ ಪೋಲೀಸ್ ಗೃಹ ನಿರ್ಮಾಣ ಸಹಕಾರ ಸಂಘವು ದಿನಾಂಕ. 15-7-1982 ರಿಂದ ಅಸ್ತಿತ್ವದಲ್ಲಿರುತ್ತದೆ.

ಆ) ಕಳೆದ ಮೂರು ವರ್ಷಗಳಲ್ಲಿ 12 ಕಾರ್ಯಕಾರಿ ಸಮಿತಿ ಸಭೆಗಳು ನಡೆದಿದೆ.

1998ನೇ ಸಾಲಿನಲ್ಲಿ ನಡೆದ ಸಭೆಗಳು : 15-5-98, 21-8-98, 17-9-98, 19-10-98, 21-12-98.

1999ನೇ ಸಾಲಿನಲ್ಲಿ ನಡೆದ ಸಭೆಗಳು: 15-1-99, 19-4-99, 28-10-99, 14-12-99

2000ನೇ ಸಾಲಿನಲ್ಲಿ ನಡೆದ ಸಭೆಗಳು: 18-6-2000, 11-7-2000, 22-8-2000..

ಇ) ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಹೆಸರು ಮತ್ತು ವಿಳಾಸ ಈ ಕೆಳಕಂಡಂತಿದೆ.

1. ಎಸ್.ಜಿ. ಮಾರ್ಟಿನ್, ನಿವೃತ್ತ ಆರಕ್ಷಕರು (ಅಧ್ಯಕ್ಷರು)
2. ಕೆ. ಜಯರಾಂ, ಅಧೀಕ್ಷಕರು, ಹಾಲಿ ಕೆ.ಎಸ್.ಆರ್.ಪಿ. ಕಛೇರಿ, ಮಂಗಳೂರು.
3. ಎಸ್. ಕುಮಾರಸ್ವಾಮಿ, ನಿರ್ದೇಶಕರು, ಆರಕ್ಷಕರು, ಕೆ.ಆರ್. ಪುರಂ, ಹಾಸನ.
4. ಎಂ.ಎಸ್. ಜವರೇಗೌಡ, ನಿರ್ದೇಶಕರು, ಹೆಡ್ ಕಾನ್ಸ್‌ಟೇಬಲ್, ಎಸ್.ಪಿ. ಕಛೇರಿ, ಹಾಸನ.
5. ವೈ.ಪಿ. ಜಯರಾಂ ನಿರ್ದೇಶಕರು ಹೆಚ್.ಸಿ. ಆಲೂರು ಠಾಣೆ
6. ಕೆ.ಹೆಚ್.ಕೃಷ್ಣ, ನಿರ್ದೇಶಕರು, ಡಿಎಆರ್, ಪಿ.ಸಿ. ಹಾಸನ.
7. ಮಾದೇಗೌಡ, ನಿರ್ದೇಶಕರು, ಎಫ್‌ಡಿಎ, ಎಸ್.ಪಿ. ಕಛೇರಿ. ಹಾಸನ.

ಈ) ಸಂಘದ ವಸತಿ ಯೋಜನೆಗಾಗಿ ಖರೀದಿಸಿದ ಜಮೀನಿನಲ್ಲಿ ನಾಗರೀಕ ಸೌಲಭ್ಯಕ್ಕಾಗಿ 42 ನಿವೇಶನಗಳು ಆಗುವ 410x250 ಅಳತೆಯ ಅಂದರೆ ಅರ್ಧ ಕರೆ ಜಮೀನನ್ನು ಉದ್ಯಾನವನಕ್ಕಾಗಿ ಮೀಸಲಿಡಲಾಗಿದೆ. ಈ ಜಮೀನಿನಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಬಿಟ್ಟಿರುವ ಯಾವುದೇ ಸೈಟುಗಳನ್ನು ಪರಭಾರೆ ಮಾಡಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಸಂಘದ ಲೆಕ್ಕಪತ್ರಗಳು 1997-98ನೇ ಸಾಲಿನವರೆಗೆ ಆಡಿಟ್ ಆಗಿರುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೇ, ಪೋಲೀಸ್ ಗೃಹ ನಿರ್ಮಾಣ ಸಹಕಾರ ಸಂಘ ದಿನಾಂಕ 15.7.82ರಂದು ಅಸ್ತಿತ್ವಕ್ಕೆ ಬಂದಿದೆ ಎಂದು ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದಿದ್ದಾರೆ. ಈ ಸೊಸೈಟಿಯಲ್ಲಿ ಇಲ್ಲಿಯವರೆಗೆ ಎಷ್ಟು ಸಾರಿ ಜನರಲ್ ಬಾಡಿ ಮೀಟಿಂಗ್ ಆಗಿವೆ?

ಶ್ರೀ ಡಿ.ಕೆ. ಶಿವಕುಮಾರ್ : ಜನರಲ್ ಬಾಡಿ ಮೀಟಿಂಗ್ ಆದ ಬಗ್ಗೆ ನನ್ನಲ್ಲಿ ಸದ್ಯಕ್ಕೆ ಮಾಹಿತಿ ಇಲ್ಲ. ಆದರೂ, ಕಳೆದ ಎರಡು ವರ್ಷಗಳಿಂದ ಯಾವ ಜನರಲ್ ಬಾಡಿ ಮೀಟಿಂಗ್ ಸೊಸೈಟಿಯಲ್ಲಿ ನಡೆದಿರುವುದಿಲ್ಲವೆಂಬ ಮಾಹಿತಿ ಮಾತ್ರ ನನಗೆ ತಿಳಿದಿದೆ.

ಶ್ರೀ ಕೆ.ಹೆಚ್. ಹನುಮೇಗೌಡ : ತಾವು ತಿಳಿಸಿರುವಂತೆ ಜನರಲ್ ಬಾಡಿ ಮೀಟಿಂಗ್ ಇದುವರೆಗೆ ಒಂದೂ ಆಗಿಲ್ಲ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ಈ ಸೊಸೈಟಿಯ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದಾರೆ? ಅಲ್ಲಿ ಇನ್ಸ್‌ಪೆಕ್ಟ್ ಮಾಡಿದ್ದಾರೆಯೇ? ಪ್ರತಿಯೊಂದು ಸಹಕಾರ ಸಂಘದ ಮೀಟಿಂಗ್‌ಗೆ ನಿಮ್ಮ ಇಲಾಖೆಯ ಒಬ್ಬರೋ, ಇಬ್ಬರೋ ಡೈರೆಕ್ಟರ್‌ಗಳು ಅಲ್ಲಿ ಅಟೆಂಡ್ ಆಗುತ್ತಾರೆ. ಮೀಟಿಂಗ್ ನಡೆಯದಿದ್ದರೆ, ಯಾವ ಕ್ರಮ ತೆಗೆದುಕೊಂಡಿದ್ದೀರಿ? ಕಾರ್ಯಕಾರಿ ಸಮಿತಿಯ 7 ಜನರ ಹೆಸರು ತಿಳಿಸಿದ್ದು, ಅವರು ಯಾವ ದಿನಾಂಕದಿಂದ ಸದಸ್ಯರಾದರು? ಅವರ ಅವಧಿ ಎಷ್ಟು? ಅವಧಿ ಮುಗಿದಿದೆಯೇ? ಮುಗಿದಿದ್ದರೆ ಪುನಃ ಬೇರೆ ಸದಸ್ಯರನ್ನು ನೇಮಿಸಿಲ್ಲವೆ? ಏಕೆ ನೇಮಿಸಿಲ್ಲ?

ಶ್ರೀ ಡಿ.ಕೆ. ಶಿವಕುಮಾರ್ : ಕಾರ್ಯಕಾರಿ ಸಮಿತಿಯ ಏಳು ಜನ ಸದಸ್ಯರು ದಿನಾಂಕ 30.5.99ರಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದು, ಅವರ ಅವಧಿ ಐದು ವರ್ಷಗಳಾಗಿವೆ. ಸಮಿತಿಯಲ್ಲಿ ಒಂಭತ್ತು ಸದಸ್ಯರು ಇರಬೇಕಾಗಿತ್ತು. ಆದರಲ್ಲೊಬ್ಬರು ರಾಜೀನಾಮೆ ಕೊಟ್ಟಿರಬಹುದು, ತೀರಿಕೊಂಡಿರಬಹುದು, ಎರಡು ಹುದ್ದೆಗಳು ಖಾಲಿ ಇದ್ದು, ಆ 7 ಜನರೂ ಈಗಾಗಲೇ ನಿರ್ದೇಶಕರಾಗಿರುತ್ತಾರೆ. ಇದು ಹಾಸನದ ಪೋಲೀಸ್ ಗೃಹ ನಿರ್ಮಾಣ ಸಹಕಾರ ಸಂಘವಾಗಿದೆ. ನಮ್ಮ ಅಧಿಕಾರಿಗಳ್ಯಾರೂ ಸಹ ಜನರಲ್ ಬಾಡಿ ಮೀಟಿಂಗ್‌ಗೆ ಹೋಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ : ಪ್ರತಿ ಸೊಸೈಟಿಗೂ ಅಂತಸ್ತಿಗೆ ತಕ್ಕಂತೆ ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಹೋಗುತ್ತಾರಲ್ಲವೆ? ಅವರ ಅವಧಿ 5 ವರ್ಷ ಎಂದಿರಿ. ಆದರೆ, ಮೊದಲಿನಿಂದಲೂ ಇವರೇ ಸದಸ್ಯರಾಗಿದ್ದಾರೆ. ಚುನಾವಣೆ ನಡೆದಿಲ್ಲ. ಮನೆಯಲ್ಲೇ ಕುಳಿತು ನಡೆದಿರುವ ವ್ಯವಹಾರವಿದು.

ತಾವು ಸಿವಿಕ್ ಅಮೆನಿಟೀಸ್ ಸೈಟ್ ಪರಭಾರೆ ಮಾಡಿಲ್ಲವೆಂದು ಹೇಳಿದ್ದೀರಿ. ಅದು ಆಗಿದೆ ಎಂದು ನನಗೆ ನಿಖರವಾಗಿ ತಿಳಿದು ಬಂದಿದೆ. ಅದರ ದಾಖಲೆಗಳನ್ನು ನಾನು ಇಲ್ಲಿ ತಂದಿಲ್ಲ. ಇಲ್ಲಿ ಕೊಟ್ಟಿರುವ ಅನೇಕ ಮಾಹಿತಿಗಳು ಸತ್ಯಕ್ಕೆ ದೂರವಾಗಿದ್ದು, ಅದನ್ನು ವೆರಿಫೈ ಮಾಡಿಸಿ. ಸೊಸೈಟಿ ಆಕ್ಟ್ ಪ್ರಕಾರ, ಯಾವ ಕ್ರಮ ತೆಗೆದುಕೊಳ್ಳಬೇಕೋ, ತೆಗೆದುಕೊಂಡು ಮುಂದಿನ ಮೀಟಿಂಗ್‌ನಲ್ಲಾದರೂ ಅದಕ್ಕೆ ರಿಪ್ಲೈ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ : ಮೀಟಿಂಗ್ ನಡೆಯದಿರುವ ಬಗ್ಗೆ ದಿ. 2.11.00ದಂದು ಅವರಿಗೆ ನೋಟೀಸ್ ಇಷ್ಯೂ ಮಾಡಿದ್ದು, ತನಿಖೆ ಮಾಡಿಸಿ, ಕಾನೂನಿನಂತೆ ಕ್ರಮ ಕೈಗೊಳ್ಳುತ್ತೇನೆ.

ಗೌರಿಬಿದನೂರು ಪಟ್ಟಣದಲ್ಲಿ ಬಸ್ ಡಿಪೋ ಪ್ರಾರಂಭಿಸುವುದು

568 - ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಜಿಲ್ಲೆ ಗೌರಿಬಿದನೂರಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಪ್ರಾರಂಭಿಸುವುದಕ್ಕೆ 2000-01ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸೇರಿಸಿದ್ದು ನಿಜವೇ?*

ಆ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?*

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ನಿಜ.

ಆ) ಸದರಿ ಘಟಕದ ನಿರ್ಮಾಣ ಕಾಮಗಾರಿಯನ್ನು ಸಂಸ್ಥೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಪ್ರಾರಂಭಿಸಿ ನಿರ್ವಹಿಸಲು ಕ್ರಮ ಜರುಗಿಸಲಾಗುವುದು.

12.40 ಪಿ.ಎಂ

ಶ್ರೀ ಎನ್. ಹೆಚ್. ಶಿವಶಂಕರ್ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟ ಉತ್ತರ ಸಮಂಜಸವಾಗಿದ್ದರೂ ಸಮಾಧಾನಕರವಾಗಿಲ್ಲವೆಂದು ನನ್ನ ಭಾವನೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 210 ಹಳ್ಳಿಗಳು ಇವೆ. ಸುಮಾರು ಹಳ್ಳಿಗಳಿಗೆ ಸಾರಿಗೆ ವ್ಯವಸ್ಥೆ ಇರುವುದಿಲ್ಲ. ಕೇವಲ 50-60 ಹಳ್ಳಿಗಳಿಗೆ ರಾಜ್ಯ ಹೆದ್ದಾರಿಯ ಸಂಪರ್ಕ ಇರಬಹುದು. ಇಂಥ ಕಡೆ ಮಾತ್ರ ಸಾರಿಗೆ ಬಸ್‌ಗಳು ಓಡಾಡುತ್ತಿವೆ. ಸದ್ಯಕ್ಕೆ ನಮಗೆ ನೆರೆಯ ಡಿಪೋಗಳಾದ ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಹಾಗೂ ಕೇಂದ್ರ ಡಿಪೋಗಳಿಂದ ಮಾತ್ರ ಬಸ್‌ಗಳು ಬರುತ್ತಿವೆ. ಹೀಗಿದ್ದರೂ ಸಾಕಷ್ಟು ಸೌಕರ್ಯವಿರುವುದಿಲ್ಲ. ಗೌರಿಬಿದನೂರಿನಲ್ಲಿ ಡಿಪೋ ನಿರ್ಮಾಣ ಮಾಡಲಿಕ್ಕೆ ಈಗಾಗಲೇ 10 ಎಕರೆ ಜಮೀನು ಇಲಾಖೆಯ ವಶಕ್ಕೆ ಕೊಟ್ಟು ಸುಮಾರು ಐದು ವರ್ಷಗಳಾಗಿವೆ. ಇದಕ್ಕೆ ಅಂದಾಜು ಕೂಡ ತಯಾರಾಗಿದ್ದು ನಾನು ಈ ಬಗ್ಗೆ ಮಾನ್ಯ